# All India Radio: Bangalore
# National Bulletin In Kannada
# 13.11.2025  19.35 p.m.
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು
## 13.11.2025  19.35 p.m.
****************

**ಮುಖ್ಯಾಂಶಗಳು**

1. **ಬಿಹಾರ ವಿಧಾನಸಭಾ ಚುನಾವಣೆ: 48 ಕೇಂದ್ರಗಳಲ್ಲಿ ನಾಳೆ ಮತ ಎಣಿಕೆ**
2. **ನೇಪಾಳ ಕೈಗಾರಿಕಾ ಸಚಿವರೊಂದಿಗೆ ಕೇಂದ್ರ ಸಚಿವ ಪಿಯೂಶ್ ಗೋಯಲ್ ದ್ವಿಪಕ್ಷೀಯ ಸಭೆ**
3. **ಪ್ರಾಜೆಕ್ಟ್ ಚೀತಾ ಅಡಿಯಲ್ಲಿ ಭಾರತಕ್ಕೆ 8 ಚೀತಾಗಳನ್ನು ಹಸ್ತಾಂತರಿಸಿದ ಬೋಟ್ಸ್ವಾನಾ**
4. **ಏಷ್ಯನ್ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್: ಭಾರತಕ್ಕೆ ಎರಡು ಚಿನ್ನ, ಒಂದು ಬೆಳ್ಳಿ**

***************

ಬಿಹಾರ ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯ ನಾಳೆ ನಡೆಯಲಿದೆ. ಬಿಹಾರದ 38 ಜಿಲ್ಲೆಗಳ 46 ಮತ ಎಣಿಕೆ ಕೇಂದ್ರಗಳಲ್ಲಿ ಎಣಿಕೆ ನಡೆಯಲಿದೆ.

ಮತಗಟ್ಟೆಗಳಿಂದ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧರಿಸುವ ವಿದ್ಯುನ್ಮಾನ ಮತಯಂತ್ರಗಳನ್ನು ಬಾರಿ ಬಿಗಿ ಭದ್ರತೆಯಲ್ಲಿ ತಂದು ಸ್ಟ್ರಾಂಗ್ ರೂಂಗಳಲ್ಲಿ ಇಡಲಾಗಿದ್ದು, ಅವುಗಳ ಸುತ್ತ ಮೂರು ಹಂತದ ಭದ್ರತಾ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ. ರಾಜ್ಯ ಪೊಲೀಸರ ಜೊತೆಗೆ ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸ್ ಪಡೆಗಳು ಭದ್ರತೆ ಹೊಣೆಯನ್ನು ಹೊತ್ತಿವೆ.

ಮತ ಎಣಿಕೆ ಕೇಂದ್ರಗಳ ಸುತ್ತ ಸಿಸಿಟಿವಿ ಅಳವಡಿಸಿ ನಿಯಂತ್ರಣ ಕೊಠಡಿಗಳನ್ನು ತೆರೆದು ನಿಗಾ ವಹಿಸಲಾಗುತ್ತದೆ. ಅರ್ಜಿ ನಮೂನೆ 17–ಸಿ ಮತ್ತು ಇವಿಎಂ ದತ್ತಾಂಶದ ನಡುವೆ ಹೊಂದಣಿಕೆಯಾಗದಿದ್ದರೆ ವಿವಿಪ್ಯಾಟ್ ಎಣಿಕೆ ಕಡ್ಡಾಯ ಎಂದು ಚುನಾವಣಾ ಆಯೋಗ ಹೇಳಿದೆ. ನಾಳೆ ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಕಾರ್ಯ ಆರಂಭವಾಗಲಿದೆ.

***************

ನವದೆಹಲಿಯಲ್ಲಿ ಇಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್, ನೇಪಾಳದ ಕೈಗಾರಿಕಾ ಸಚಿವ ಅನಿಲ್ ಕುಮಾರ್ ಸಿನ್ಹಾ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು.

ಸಭೆಯ ಸಂದರ್ಭದಲ್ಲಿ ಎರಡೂ ಕಡೆಯವರು ಭಾರತ ಮತ್ತು ನೇಪಾಳ ನಡುವಿನ ಸಾರಿಗೆ ಒಪ್ಪಂದಕ್ಕೆ ತಿದ್ದುಪಡಿ ತರುವ ವಿನಿಮಯ ಪತ್ರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು.

ಇದು ಜೋಗ್ಬನಿ–ಬಿರಾಟ್‌ನಗರ ನಡುವೆ ನೇರ ರೈಲು ಸಂಪರ್ಕ ಕಲ್ಪಿಸುತ್ತದೆ. ಈ ಉಪಕ್ರಮವು ಕೊಲ್ಕತ್ತಾ ಮತ್ತು ವಿಶಾಖಪಟ್ಟಣ ಬಂದರುಗಳಿಂದ ನೇಪಾಳ ಕಸ್ಟಮ್ಸ್ ಯಾರ್ಡ್ ಸರಕು ನಿಲ್ದಾಣಕ್ಕೆ ಸುಗಮಗೊಳಿಸುತ್ತದೆ. ಅಲ್ಲದೇ, ಉಭಯ ದೇಶಗಳ ನಡುವೆ ವ್ಯಾಪಾರವನ್ನು ಬಲಪಡಿಸುತ್ತದೆ ಎಂದು ಕೈಗಾರಿಕಾ ಸಚಿವಾಲಯ ತಿಳಿಸಿದೆ.

***************

ಪ್ರಾಜೆಕ್ಟ್ ಚೀತಾ ಅಡಿಯಲ್ಲಿ ಬೋಟ್ಸ್ವಾನಾ, ಇಂದು ಭಾರತಕ್ಕೆ ಎಂಟು ಚೀತಾಗಳನ್ನು ಹಸ್ತಾಂತರಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಬೋಟ್ಸ್ವಾನಾ ಅಧ್ಯಕ್ಷ ಡುಮಾ ಬೊಕೊ ನಡುವಿನ ದ್ವಿಪಕ್ಷೀಯ ಮಾತುಕತೆಯಲ್ಲಿ ಇದನ್ನು ಘೋಷಿಸಲಾಯಿತು.

ಸೆರೆಹಿಡಿದ ಚಿರತೆಗಳನ್ನು ಗ್ಯಾಬೊರೋನ್ ಬಳಿಯ ಕ್ವಾರಂಟೈನ್ ಸೌಲಭ್ಯಕ್ಕೆ ಬಿಡುಗಡೆ ಮಾಡುವುದನ್ನು ಉಭಯ ನಾಯಕರು ವೀಕ್ಷಿಸಿದರು. ಈ ಹಸ್ತಾಂತರವು ಎರಡು ದೇಶಗಳ ನಡುವಿನ ವನ್ಯಜೀವಿ ಸಂರಕ್ಷಣೆಯಲ್ಲಿ ದ್ವಿಪಕ್ಷೀಯ ಸಹಕಾರದಲ್ಲಿ ಹೊಸ ಅಧ್ಯಾಯದ ಆರಂಭವನ್ನು ಸೂಚಿಸುತ್ತದೆ.

ಇದೇ ವೇಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬೋಟ್ಸ್ವಾನಾದಲ್ಲಿರುವ ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡಿದರು.

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ದಾಳಿಯಲ್ಲಿ ಬಲಿಯಾದವರ ಕುಟುಂಬಗಳಿಗೆ ರಾಷ್ಟ್ರಪತಿಗಳು ಸಂತಾಪ ಸೂಚಿಸಿದರು.

ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು

ಭಾರತೀಯ ವಲಸಿಗರು ಬೊಟ್ಸ್‌ವಾನಾ-ಭಾರತ ನಡುವಿನ ಸ್ನೇಹದ ಜೀವಂತ ಸೇತುವೆಯಾಗಿದ್ದಾರೆ ಎಂದ ಅವರು, ಬೊಟ್ಸ್‌ವಾನಾದ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಗೆ ನೀಡಿದ ಕೊಡುಗೆಗಾಗಿ ಭಾರತೀಯ ಸಮುದಾಯವನ್ನು ಶ್ಲಾಘಿಸಿದರು.

2047ರ ವೇಳೆಗೆ ವಿಕಸಿತ ಭಾರತ ಆಗಲು ಭಾರತ ಧಾಪುಗಾಲು ಇಡುತ್ತಿದೆ. ಈ ಅಭಿವೃದ್ಧಿ ಪ್ರಯಾಣದಲ್ಲಿ ಭಾರತೀಯ ವಲಸಿಗರು ಅವಿಭಾಜ್ಯ ಅಂಗವಾಗಿದ್ದಾರೆ. ಅವರ ಸಾಧನೆ ಭಾರತದ ಹೆಮ್ಮೆ, ಅವರ ಯಶಸ್ಸು ಭಾರತದ ಘನತೆಯನ್ನು ಹೆಚ್ಚಿಸುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

***************

ದೇಶದ ಎಲ್ಲಾ ಬಂದರುಗಳನ್ನು ಆಧುನೀಕರಣಗೊಳಿಸುವ ಮೂಲಕ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಬಂದರು, ಹಡಗು ಮತ್ತು ಜಲಸಾರಿಗೆ ಸಚಿವ ಸರ್ಬಾನಂದ ಸೋನಾವಾಲ್ ತಿಳಿಸಿದ್ದಾರೆ.

ನವ ಮಂಗಳೂರು ಬಂದರು ಪ್ರಾಧಿಕಾರದ ಸುವರ್ಣ ಮಹೋತ್ಸವ ಸಂಭ್ರಮದ ವೇಳೆ 1 ಸಾವಿರದ 500 ಕೋಟಿ ರೂಪಾಯಿ ಮೌಲ್ಯದ 20 ವಿವಿಧ ಯೋಜನೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲಾ ಬಂದರುಗಳ ಸಾಮರ್ಥ್ಯವನ್ನು ತಾಂತ್ರಿಕವಾಗಿ, ಡಿಜಿಟಲೀಕರಣಗೊಳಿಸುವ ಮೂಲಕ ಮೇಲ್ದರ್ಜೆಗೇರಿಸಲಾಗಿದೆ ಎಂದು ಹೇಳಿದ್ದಾರೆ.

90 ಸಾವಿರ ಟನ್‌ಗಳಷ್ಟು ಸರಕು ರಫ್ತು ಮಾಡುತ್ತಿದ್ದ ನವಮಂಗಳೂರು ಬಂದರು ಈಗ 46 ದಶಲಕ್ಷ ಟನ್‌ಗಳಷ್ಟು ಸರಕು ರಫ್ತು ಮಾಡುತ್ತಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ್ ಜೋಶಿ ಮಾತನಾಡಿ, ದೇಶದ ಸಮಗ್ರ ಅಭಿವೃದ್ಧಿಯ ಚಿಂತನೆ ಹೊಂದಿರುವ ಪ್ರಧಾನಿ ನರೇಂದ್ರ ಮೋದಿಯವರಿಂದಾಗಿ ಭಾರತ ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ. ವಿಕಸಿತ ಭಾರತ ಕಲ್ಪನೆಯಿಂದಾಗ ದೇಶದಲ್ಲಿ ಮಹತ್ತರ ಬದಲಾವಣೆ ಆಗುತ್ತಿದೆ ಎಂದು ಹೇಳಿದ್ದಾರೆ. ಮಂಗಳೂರು ಬಂದರಿನ ಮೂಲಕ ಕಾರ್ಗೋ ರಫ್ತು ಇನ್ನೂ ಹೆಚ್ಚಾಗಬೇಕು. ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಹೆಚ್ಚು ಆದ್ಯತೆ ನೀಡಬೇಕು ಎಂದು ತಿಳಿಸಿದ್ದಾರೆ.

***************

ಫರಿದಾಬಾದ್‌ನ ಅಲ್-ಫಲಾಹ್ ವಿಶ್ವವಿದ್ಯಾಲಯ, ತನ್ನ ವೆಬ್‌ಸೈಟ್‌ನಲ್ಲಿ ಸುಳ್ಳು ಮಾನ್ಯತೆಯನ್ನು ಪ್ರಕಟಿಸಿದ್ದಕ್ಕಾಗಿ ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತೆ ಮಂಡಳಿ-ನ್ಯಾಕ್ ಶೋಕಾಸ್ ನೋಟಿಸ್ ನೀಡಿದೆ.

ಈ ಕುರಿತು ವಿಶ್ವವಿದ್ಯಾಲಯಕ್ಕೆ ನ್ಯಾಕ್, ವಿವರಣೆಯನ್ನು ಕೇಳಿದೆ. ಅಲ್ಲದೇ ತನ್ನ ವೆಬ್‌ಸೈಟ್‌ನಿಂದ ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ಅಥವಾ ವಿತರಿಸಲಾದ ಯಾವುದೇ ದಾಖಲೆಗಳಿಂದ ನ್ಯಾಕ್ ಮಾನ್ಯತೆ ವಿವರಗಳನ್ನು ತೆಗೆದು ಹಾಕುವಂತೆ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಿದೆ.

ದೆಹಲಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯವನ್ನು ಪರಿಶೀಲನೆಗೆ ಒಳಪಡಿಸಲಾಗಿದೆ ಎಂದು ವರದಿಯಾಗಿದೆ.

***************

ದೆಹಲಿ ಸ್ಫೋಟ ಘಟನೆಯ ನಂತರ ಬೆಂಬಲ ಮತ್ತು ಒಗ್ಗಟ್ಟನ್ನು ವ್ಯಕ್ತಪಡಿಸಿದ್ದಕ್ಕಾಗಿ ದಕ್ಷಿಣ ಕೊರಿಯಾದ ವಿದೇಶಾಂಗ ಸಚಿವ ಚೊ ಹ್ಯೂನ್ ಮತ್ತು ಸಿಂಗಾಪುರ ವಿದೇಶಾಂಗ ಸಚಿವ ವಿವಿಯನ್ ಬಾಲಕೃಷ್ಣ ಅವರಿಗೆ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಕೃತಜ್ಞತೆ ಸಲ್ಲಿಸಿದ್ದಾರೆ.

ಭಾರತವು ಸಿಂಗಾಪುರದ ಭಾವನೆಗಳನ್ನು ಮತ್ತು ದಕ್ಷಿಣ ಕೊರಿಯಾದ ಬೆಂಬಲವನ್ನು ಗೌರವಿಸುತ್ತದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಡಾ.ಎಸ್.ಜೈಶಂಕರ್ ಹೇಳಿದ್ದಾರೆ.

***************

ನವದೆಹಲಿಯಲ್ಲಿಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಅವರು ಕೆನಡಾದ ಅಂತಾರಾಷ್ಟ್ರೀಯ ವ್ಯಾಪಾರ ಸಚಿವ ಮಣೀಂದರ್ ಸಿಧು ಅವರೊಂದಿಗೆ ಸಭೆ ನಡೆಸಿದರು.

ಈ ಸಭೆಯು ವ್ಯಾಪಾರ ಮತ್ತು ಹೂಡಿಕೆ ಕುರಿತ ಏಳನೇ ಭಾರತ-ಕೆನಡಾ ಸಚಿವರ ಸಂವಾದದ ಭಾಗವಾಗಿದೆ. ಸಭೆಯಲ್ಲಿ ಎರಡೂ ಕಡೆಯವರು ಉಭಯ ದೇಶಗಳ ನಡುವೆ ದ್ವಿಪಕ್ಷೀಯ ವ್ಯಾಪಾರವನ್ನು ಬಲಪಡಿಸುವ, ಹೂಡಿಕೆಗಳನ್ನು ಉತ್ತೇಜಿಸುವ ಮತ್ತು ಸಹಕಾರವನ್ನು ಗಾಢಗೊಳಿಸುವ ಮಾರ್ಗಗಳ ಕುರಿತು ಚರ್ಚಿಸಿದರು ಎಂದು ಸಾಮಾಜಿಕ ಮಾಧ್ಯಮದಲ್ಲಿ ಸಚಿವ ಪಿಯೂಶ್ ಗೋಯಲ್ ತಿಳಿಸಿದ್ದಾರೆ.

***************

ಪಾಸ್‌ಪೋರ್ಟ್ ಸೇವಾ ಕಾರ್ಯಕ್ರಮದ ನವೀಕರಿಸಿದ ಆವೃತ್ತಿಯನ್ನು ಯಶಸ್ವಿಯಾಗಿ ಜಾರಿಗೊಳಿವುದಾಗಿ ವಿದೇಶಾಂಗ ಸಚಿವಾಲಯ ಘೋಷಿಸಿದೆ.

ಭಾರತದಲ್ಲಿನ ನಾಗರಿಕರು ಮತ್ತು ವಿದೇಶದಲ್ಲಿ ವಾಸಿಸುವವರಿಗೆ ಪಾಸ್‌ಪೋರ್ಟ್ ಸೇವಾ ಕಾರ್ಯಕ್ರಮ, ಜಾಗತಿಕ ಪಾಸ್‌ಪೋರ್ಟ್ ಸೇವಾ ಕಾರ್ಯಕ್ರಮ ಮತ್ತು ಇ-ಪಾಸ್‌ಪೋರ್ಟ್ ಅನ್ನು ಈ ಉಪಕ್ರಮದಡಿ ಸೇರಿಸಲಾಗಿದೆ.

ಈ ವರ್ಷ ಮೇ 26 ರಂದು ಪ್ರಾರಂಭಿಸಲಾದ ಪಿಎಸ್‌ಪಿ ವಿ2.0 ಅನ್ನು ದೇಶದ ಎಲ್ಲ ಪಾಸ್‌ಪೋರ್ಟ್ ಕಚೇರಿಗಳಲ್ಲಿ ಮತ್ತು ಅವುಗಳ ಸಂಬಂಧಿತ 93 ಪಾಸ್‌ಪೋರ್ಟ್ ಸೇವಾ ಕೇಂದ್ರಗಳಲ್ಲಿ ಹಾಗೂ 450 ಅಂಚೆ ಕಚೇರಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳಲ್ಲಿ ಯಶಸ್ವಿಯಾಗಿ ಜಾರಿಗೆ ತರಲಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

***************

ಢಾಕಾದಲ್ಲಿ ನಡೆದ 24ನೇ ಏಷ್ಯನ್ ಬಿಲ್ಲುಗಾರಿಕೆ ಚಾಂಪಿಯನ್‌ಶಿಪ್ 2025 ರಲ್ಲಿ ಭಾರತದ ಬಿಲ್ಲುಗಾರರು ಅದ್ಭುತ ಪ್ರದರ್ಶನ ನೀಡಿದ್ದು, ಇಂದು ಎರಡು ಚಿನ್ನ ಮತ್ತು ಒಂದು ಬೆಳ್ಳಿ ಪದಕ ಗೆದ್ದರು.

ಫೈನಲ್‌ನಲ್ಲಿ ದೀಪಿಕಾ, ಜ್ಯೋತಿ ಸುರೇಖಾ ವೆನ್ನಂ ಮತ್ತು ಪ್ರೀತಿಕಾ ಪ್ರದೀಪ್ ಅವರನ್ನೊಳಗೊಂಡ ಸಂಯುಕ್ತ ಮಹಿಳಾ ತಂಡವು ಕೊರಿಯಾ ತಂಡವನ್ನು 236–234 ಅಂತರದಿಂದ ಸೋಲಿಸಿ, ಚಿನ್ನದ ಪದಕ ಗೆದ್ದರು.

ಸಂಯುಕ್ತ ಮಿಶ್ರ ವಿಭಾಗದಲ್ಲಿ ಭಾರತದ ಅಭಿಷೇಕ್ ವರ್ಮಾ ಹಾಗೂ ದೀಪಿಕಾ ಜೋಡಿಯು ಫೈನಲ್‌ನಲ್ಲಿ ಬಾಂಗ್ಲಾದೇಶವನ್ನು 153–151 ಅಂತರದಿಂದ ಪರಾಭವಗೊಳಿಸಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ.

ಮತ್ತೊಂದೆಡೆ ಅಭಿಷೇಕ್ ವರ್ಮಾ ಮತ್ತು ಪ್ರಥಮೇಶ್ ಅವರೊನ್ನೊಳಗೊಂಡ ಸಂಯುಕ್ತ ಪುರಷರ ತಂಡ, ಫೈನಲ್‌ನಲ್ಲಿ ಕಜಕಿಸ್ತಾನ ತಂಡವನ್ನು ಸೋಲಿಸಿ ಬೆಳ್ಳಿ ಪದಕ ಗೆದ್ದಿದೆ.

***************

ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ನಾಳೆ ಸಿಕ್ಕಿಂನಲ್ಲಿ ಈಶಾನ್ಯ ರಾಜ್ಯಗಳ 13ನೇ ಅಂತಾರಾಷ್ಟ್ರೀಯ ಪ್ರವಾಸಿ ಮೇಳವನ್ನು ಉದ್ಘಾಟಿಸಲಿದ್ದಾರೆ.

ಈ ನಾಲ್ಕು ದಿನಗಳ ಮೇಳದಲ್ಲಿ ಈಶಾನ್ಯ ಭಾಗದಲ್ಲಿರುವ ಪ್ರವಾಸೋದ್ಯಮ ಸ್ಥಳಗಳ ಐತಿಹ್ಯ, ಅವುಗಳ ಸೌಂದರ್ಯವನ್ನು ಬಿಂಬಿಸಲಾಗುವುದು. ಆ ಭಾಗದಲ್ಲಿ ಅಡಗಿರುವ ಶ್ರೀಮಂತ, ನೈಸರ್ಗಿಕ ಸೊಬಗು, ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸಾಹಸ ಪ್ರವಾಸೋದ್ಯಮ ಅವಕಾಶಗಳನ್ನು ಬಿಂಬಿಸುವ ಜೊತೆಗೆ ಸುಸ್ಥಿರ ಮತ್ತು ಎಲ್ಲವನ್ನು ಒಳಗೊಂಡ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ನೀಡಲಾಗುವುದು.

ಈ ಮೇಳದಲ್ಲಿ ಸ್ಪೇನ್, ಥೈಲ್ಯಾಂಡ್, ಫ್ರಾನ್ಸ್, ರಷ್ಯಾ, ಜರ್ಮನಿ ಸೇರಿದಂತೆ 19 ರಾಷ್ಟ್ರಗಳು ಭಾಗವಹಿಸಲಿವೆ. ಮೇಳದಲ್ಲಿ ಈಶಾನ್ಯ ರಾಜ್ಯಗಳನ್ನು ಬಿಂಬಿಸುವ ಶ್ರೀಮಂತ ಕಲೆ ಹಾಗೂ ಪರಂಪರೆಗಳನ್ನು ಸಹ ಪ್ರದರ್ಶಿಸಲಾಗುವುದು.

***************

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಪುರುಷರ ಎರಡು ಟೆಸ್ಟ್ ಪಂದ್ಯಗಳ ಕ್ರಿಕೆಟ್ ಸರಣಿ ನಾಳೆ ಆರಂಭವಾಗಲಿದೆ. ಆರಂಭಿಕ ಪಂದ್ಯ ಕೋಲ್ಕೊತ್ತಾದ ಈಡನ್ ಗಾರ್ಡನ್‌ನಲ್ಲಿ ನಡೆಯಲಿದೆ.

ಶುಭಮನ್‌ಗಿಲ್ ಪಡೆ ತನ್ನ ಗೆಲುವಿನ ಅಭಿಯಾನವನ್ನು ಮುಂದುವರಿಸುವ ತವಕದಲ್ಲಿದೆ. ವೆಸ್ಟ್ ಇಂಡೀಸ್ ವಿರುದ್ಧದ ಸರಣಿ ಕೈವಶ ಮಾಡಿಕೊಂಡಿರುವ ಭಾರತ ತಂಡ, ಈ ಸರಣಿಯನ್ನು ಸಹ ಗೆಲ್ಲುವ ಆತ್ಮವಿಶ್ವಾಸದಲ್ಲಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಅಭಿಯಾನದಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ.

*******ಮುಕ್ತಾಯ*******